ದಿನಾಂಕ**: 19.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ ಬಿ ಎಲ್ ವಕೀಲರಿಂದಃ-

ನಾನು ದ್ವಿತಿಯ ಪಿಯುಸಿ ರವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ದಾವಾ ಸ್ವತ್ತಿನ ಸಂಖ್ಯೆ 192, ವಿಸ್ತೀರ್ಣ ಪೂರ್ವ-ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 15 ಅಡಿ ಇರುತ್ತದೆ. ದಾವಾ ಸ್ವತ್ತು ಮೂಲತಃ ನನಗೆ ಸೇರಿತ್ತು. ಸರ್ಕಾರದಿಂದ ನನಗೆ ಹಕ್ಕು ಪತ್ರ ನೀಡಿಲ್ಲ, ಅನುಬೋಗದ ಖಾತೆ ಮಾಡಿರುತ್ತಾರೆ. ಅನುಬೋಗದಂತೆ ಖಾತೆ ಮಾಡಿ ಎಂದು ಪಂಚಾಯತಿಗೆ ಅರ್ಜಿಯನ್ನು ನೀಡಿರುತ್ತೇನೆ. ಪಂಚಾಯತಿಯವರು ಖಾತೆ ಮಾಡುವ ವಿಚಾರವಾಗಿ ಮೀಟಿಂಗ್ ಮಾಡಿದ್ದರು. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಪಂಚಾಯತಿಯವರು ಯಾವುದೇ ರೆಸಲ್ಯೂಷನ್ ಮಾಡಿಲ್ಲ ಎಂದರೆ ಸರಿಯಲ್ಲ.

2. ವಾದಿ ನನ್ನ ಸಂಬಂಧಿಕರಲ್ಲ ಎಂದರೆ ಸರಿ. ದಾವಾ ಸ್ವತ್ತು ಪ್ರಸ್ತುತ ಖಾಲಿ ಜಾಗ. ದಾವಾ ಸ್ವತ್ತಿನ ಉತ್ತರಕ್ಕೆ ಮುನಿಯಪ್ಪ ಮನೆ ಕಟ್ಟಿರುತ್ತಾರೆ. ಸದರಿ ಮುನಿಯಪ್ಪನವರ ಮನೆಯ ದಕ್ಷಿಣಕ್ಕೆ ಜಾಗ ಬಿಡದೇ, ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಸದರಿ ಮುನಿಯಪ್ಪನವರ ಮನೆಯ ನಂಬರ್ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ದಾವಾ ಸ್ವತ್ತಿನ ಖಾತೆ ಈಗ ವಾದಿಯ ಹೆಸರಿನಲ್ಲಿರುತ್ತದೆ. ನನಗೆ ಜಿಪಿಎ ಬರೆದುಕೊಟ್ಟಿರುತ್ತಾರೆ. ದಾವಾ ಸ್ವತ್ತಿನಲ್ಲಿ ನಾನೇ ಸ್ವಾದೀನದಲ್ಲಿ ಇರುತ್ತೇನೆ. ವಾದಿಯು ನನಗೆ ಸ್ವಾದೀನವನ್ನು

ಬಿಟ್ಟುಕೊಟ್ಟ ಬಗ್ಗೆ ಜಿಪಿಎ ಅಗ್ರಿಮೆಂಟ್ ನ್ನು ಬರೆದುಕೊಟ್ಟಿರುತ್ತಾರೆ ಮತ್ತು ಕರಾರು ಪತ್ರದಲ್ಲಿ ಬರೆದುಕೊಟ್ಟಿರುತ್ತಾರೆ.

3. ಜಿಪಿಎ ಮೂಲ ಪತ್ರ ನನ್ನ ಹತ್ತಿರ ಇರುತ್ತದೆ. ಜಿಪಿಎಯ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ಸಮಸ್ಯೆ ಇರುವುದಿಲ್ಲ. ಪಿಡಿಓ ರವರು ದಾವಾ ಸ್ವತ್ತನ್ನು ಅಳತೆ ಮಾಡಿ ದಿನಾಂಕ 20.11.2019 ರಲ್ಲಿ ಮಹಜರ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ಮಾಡುವ ಕಾಲದಲ್ಲಿ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಪಿಡಿಓ ರವರು ಮಹಜರ್ ಮಾಡಿ ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 12 ವರೆ ಅಡಿ ಮಾತ್ರ ನಮ್ಮ ಖಾಲಿ ಜಾಗ ಇರುತ್ತದೆ ಎಂದು ಮಹಜರ್ ಬರೆದಿರುತ್ತಾರೆ ಎಂದರೆ ಸರಿಯಲ್ಲ.

4. ಪ್ರತಿವಾದಿಗಳ ಆಸ್ತಿ ನಂಬರ್ ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಗಳ ಆಸ್ತಿ ಬರುತ್ತದೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳ ಸ್ವತ್ತಿನ ಪೂರ್ವಕ್ಕೆ ನಾರಾಯಣಸ್ವಾಮಿರವರ ಆಸ್ತಿ ಬರುತ್ತದೆ ಎಂದರೆ ಸರಿ. ಸದರಿ ನಾರಾಯಣಸ್ವಾಮಿ 2 ನೇ ಪ್ರತಿವಾದಿಯ ತಮ್ಮ ಎಂದರೆ ಸರಿ. ಸದರಿ ನಾರಾಯಣಸ್ವಾಮಿ ರವರ ಸ್ವತ್ತಿನ ಪೂರ್ವಕ್ಕೆ ರಸ್ತೆ ಬರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಗಳ ಮತ್ತು ನಾರಾಯಣಸ್ವಾಮಿ ಇಬ್ಬರ ಆಸ್ತಿ ಬರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮಗ ಎಂದರೆ ಸರಿ.

5. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಮತ್ತು ನಂತರ ಪ್ರತಿವಾದಿಗಳು ದಾವಾ ಸ್ವತ್ತಿಗೆ ತೊಂದರೆ ನೀಡಿದ್ದ ಕಾರಣದಿಂದಾಗಿ ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ. ದಾವಾ ಪೂರ್ವದಲ್ಲಿ ದೂರು ಕೊಟ್ಟ ಬಗ್ಗೆ ಎನ್ ಸಿ ಆರ್ ನ್ನು ಹಾಜರುಪಡಿಸಿರುವುದಿಲ್ಲ. ನಿಪಿ.5 ರಿಂದ 8 ದಾವೆ ಸಲ್ಲಿಸಿದ ನಂತರ ನೀಡಿರುವ ದಾಖಲೆಗಳು ಎಂದರೆ ಸರಿ. ಪ್ರತಿವಾದಿಗಳ ಆಸ್ತಿ ಪೂರ್ವ-

ಪಶ್ಚಿಮ 34 ಅಡಿ, ಉತ್ತರ ದಕ್ಷಿಣ 30 ಅಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಪ್ರತಿವಾದಿಗಳಿಗೆ ಓ.ಎಸ್.ನಂ.85/2011 ರಂತೆ ರಾಜಿ ಡಿಕ್ರಿ ಮೂಲಕ ಬಂದಂತಹ ಆಸ್ತಿ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಆಸ್ತಿಯಲ್ಲಿ 2 ಅಡಿ ಕೂಚಗಳನ್ನು ಹೂಣಲು ಬಂದಿರುತ್ತಾರೆ. ನಿಪಿ.12 ರಲ್ಲಿ ಎಡಭಾಗದಲ್ಲಿ ಕಾಣುತ್ತಿರುವ ಹಿಂದಿನ ಮನೆ 2 ನೇ ಪ್ರತಿವಾದಿಗೆ ಸೇರಿದ್ದು ಮತ್ತು ಮುಂದೆ ಇರುವ ಮನೆ ನಾರಾಯಣಸ್ವಾಮಿಗೆ ಸೇರಿದ್ದು ಎಂದರೆ ಸರಿ. ನಿಪಿ.12 ರಲ್ಲಿ ಕೂಚಗಳನ್ನು ಹಾಕಿರುವ ಬಗ್ಗೆ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಕೂಚಗಳನ್ನು ಹೂಣಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

6. ನಾರಾಯಣಸ್ವಾಮಿ ರವರು ಉತ್ತರಕ್ಕೆ ಪ್ರತಿವಾದಿಗಳು ಓಡಾಡಲು ಜಾಗ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ಓ.ಎಸ್.85/2011 ರ ರಾಜಿ ಅರ್ಜಿಯಲ್ಲಿ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ಅನುಮತಿಸಲಾಯಿತು)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.